# ಮಹಾವೃಕ್ಷದ ಮೈಯೆಲ್ಲ ಕಣ್ಣುಗಳು ನಿಂತಲ್ಲೇ ವಿಜಯನಗರದ ಬಿಂಬಗಳು

ಕೊಂಬೆ–3

ಹಾಗೇ ಮೇಲೇರುತ್ತ ಮೇಲೇರುತ್ತಾ ಬೆಳೆದೆ. ಬೆಳೆದು ದೂರ ದೂರ ಇಣುಕಿ ನೋಡಲು, ನೋಡಿ ಅಲ್ಲಲ್ಲಿನ ಸುದ್ದಿಯನ್ನು ತಿಳಿಯಲು ಪ್ರಯತ್ನಿಸುತ್ತಿದ್ದೆ. ಕಾಲನ ಚಕ್ರವನ್ನು ಕಟ್ಟಿಕೊಂಡಂತೆ ಭರಭರನೇ ಓಡುತ್ತಿದ್ದ ಸೂರ್ಯ ಪರಮಾತ್ಮ ಮಾತ್ರ ಹಗಲು ರಾತ್ರಿ ಅಂತ ನೋಡದೇ, ಹಿಂದಿನದ್ದನ್ನೆಲ್ಲ ಇತಿಹಾಸವಾಗಿಸುತ್ತಾ, ಮುಂದಿನದ್ದನ್ನೆಲ್ಲ ಭವಿಷ್ಯವಾಗಿಸುತ್ತಾ ವರ್ತಮಾನದಲ್ಲಿ ಗರಗರನೆ ತಿರುಗುತ್ತಿದ್ದ. ಮಳೆಗಾಲದಲ್ಲಿ ಆಗಾಗ ಮೋಡಗಳ ಮರೆಯಲ್ಲಿ ಇಣುಕಿಣುಕಿ ನೋಡುತ್ತ ಇನ್ನೂ ಬೇಕು, ಇನ್ನೂ ಬೇಕು ಎಂದು ತನ್ನೆಡೆಗೆ ಆಕರ್ಷಣೆಯ ಅಯಸ್ಕಾಂತದಂತೆ ಸೆಳೆಯುತ್ತಿದ್ದ. ಚಳಿಗಾಲದಲ್ಲಿ ಚುಮುಚುಮು ಛಳಿ ಹತ್ತಿಸುತ್ತ, ಇದ್ದಬದ್ದ ಎಲೆಗಳನ್ನೆಲ್ಲ ಉದುರಿ ಬೀಳುವಂತೆ ಮಾಡುತ್ತಿದ್ದ. ಆಗ ನನ್ನ ಸಂವೇದನೆಯ ಪ್ರಮಾಣ ಕಡಿಮೆಯಾದಂತೆ ನನಗೇ ಅನ್ನಿಸುತ್ತಿದ್ದುದರಿಂದ ತನ್ನ ಇರುವಿಕೆಯನ್ನು ಇನ್ನಷ್ಟು ಅನಿವಾರ್ಯಗೊಳಿಸುತ್ತಿದ್ದ. ಅವನ ಆಮೋದಕ್ಕೆ ಚಿಗುರೆಲೆಗಳು ಮತ್ತೆ ಕುಡಿಯೊಡೆಯುತ್ತಿದ್ದವು. ಆದರೆ ಅದೇ ಬೇಸಿಗೆಯಲ್ಲಿ ಮಾತ್ರ ರಣರಣ ಉರಿಯುತ್ತ ಕಂಡಕಂಡವರ ಮೇಲೆ ಕೆಂಡ ಕಾರುವವನಂತೆ ಭಾಸವಾಗುತ್ತಿದ್ದ. ಆದರೆ ಅದೇಕೆ ಹೀಗೆ ಋತುಗಳು ಬದಲಾಗುತ್ತವೆ ಎಂಬ ಅರಿವೇ ಆಗ ನನಗಿರಲಿಲ್ಲ. ಅಷ್ಟಕ್ಕೂ ನಾನಾದರೂ ಇನ್ನೆಷ್ಟು ಋತುಗಳನ್ನು ಕಂಡಿರುವೆ?

ಎಲೆಗಳ ತುತ್ತ ತುದಿಯಿಂದ ದೂರದೂರವನ್ನು ಇನ್ನಷ್ಟು ಮತ್ತಷ್ಟು ಇಣುಕಿ ಇಣುಕಿ ಅದರಾಚೆ ಏನಿದೆ, ಮತ್ತದರಾಚೆ ಏನಿದೆ ಎಂಬ ಕುತೂಹಲ ತಣಿಯಲಾರದೆನ್ನುವಂತೆ ಸುತ್ತಮುತ್ತಲ ಹತ್ತು ದಿಕ್ಕುಗಳನ್ನೂ ನಿರುಕಿಸುತ್ತಿದ್ದೆ. ಆಗೆಲ್ಲ, ನಾನು ಹೀಗೆ ಬೇರುಗಳನ್ನೂರಿ ಸ್ಥಾವರವಾಗುವುದರ ಬದಲು, ಜಂಗಮವಾಗಿದ್ದರೆ ಎಷ್ಟೊಂದು ಚೆನ್ನಿತ್ತು ಎಂದು ಪದೇ ಪದೇ ಅನ್ನಿಸದಿರುತ್ತಿರಲಿಲ್ಲ. ಹಾಗಿದ್ದರೆ ಇಡೀ ಭೂಮಿಯನ್ನು ನಿರಂತರವಾಗಿ ಸುತ್ತಾಡಿ ಸುತ್ತಾಡಿ ಸವೆಸಿಬಿಡುತಿದ್ದೆನೇನೋ ಎಂದು ಅನಿಸಿದ್ದು ಸುಳ್ಳಲ್ಲ. ಇಲ್ಲವೇ ನನ್ನನ್ನೂ ಜಿಂಕೆ, ಮೊಲಗಳಂತೆ ಯಾರ‍್ಯಾರು ಎಲ್ಲೆಲ್ಲಿ ಹಿಡಿದು ತಿಂದುಹಾಕಿಬಿಡುತ್ತಾರೋ ಎಂದು ಜೀವಭಯದಿಂದ ಹೆದರಿ ಎಲ್ಲೂ ತಿರುಗಾಡದೇ ಯಾವುದಾದರೂ ಪೊದೆಯಲ್ಲಿ ಅಡಗಿ ಕುಳಿತುಬಿಡುತ್ತಿದ್ದೆನೇನೋ ಗೊತ್ತಿಲ್ಲ! ಹೀಗೆ ಇರುವುದನ್ನೆಲ್ಲ ಬಿಟ್ಟು ಇರದುದರೆಡೆಗೆ ತುಡಿವುದೇ ಜೀವನವಂತೆ...

ನನ್ನ ಹೊಸ ಎಲೆಗಳು ಚಿಗುರುವ ವೇಳೆಗೆ ನಾನು ಇನ್ನಷ್ಟು ಎತ್ತರ ಬೆಳೆದಿದ್ದೆ. ಆಗ ದಟ್ಟಕಾಡಿನ ನಡುವೆ ಎಂಥದೋ ಬೆಳ್ಳಿ ಮೋಡದಂಥ ಬಿಳೀ ಅಂಚು ಕಾಣಿಸಿತು. ಮತ್ತೆ ಮತ್ತೆ ಗಾಳಿಗೆ ಎಗರೀ ಎಗರಿ ಎಲೆಗಳನ್ನು ಹಾರಿಸಿ ನೋಡಿದೆ. ಒಂದು ಬಿಳಿ ಹಾವಿನಂಥ ಆಕೃತಿ ನಿರಂತರವಾಗಿ ಚಲಿಸುತ್ತಲೇ ಇತ್ತು. ನಿಟ್ಟಿಸಿ ನೋಡಿದರೆ ಅದೊಂದು ನದಿ. ಆದರೆ ಆಗ ಈಗಿನಷ್ಟು ವಿಶಾಲವಾಗಿರಲಿಲ್ಲ. ಸಣ್ಣ ಹಳ್ಳವೊಂದು ನೂರಾರು ಸಾವಿರಾರು ವರ್ಷಗಳ ಕಾಲ ಇಡುಕಿರಿದು ಮಳೆನೀರನ್ನು ಹರಿಸೀ ಹರಿಸಿ ದೊಡ್ಡ ಹಳ್ಳವಾಗುವಂತೆ, ದೊಡ್ಡ ಹಳ್ಳವೊಂದು ಸಣ್ಣ ನದಿಯಾಗುವಂತೆ ಆಗಿತ್ತು. ಅದು ವಸಂತದ ಕಾಲವಾಗಿದ್ದರಿಂದ ನದಿಯಲ್ಲಿ ನೀರಿನ ಹರಿವು ಅಷ್ಟಾಗಿರಲಿಲ್ಲ. ಮೆಲ್ಲಮೆಲ್ಲನೆ ಹೆಜ್ಜೆಯಿಡುತ್ತ ಘಲ್‌ಘಲ್ ಎಂಬ ಕಾಲ್ಗೆಜ್ಜೆಯ ನಾದವನ್ನು ಹೊಮ್ಮಿಸುತ್ತ ನಾಚುವ ಹೆಣ್ಣಿನಂತೆ ಗುಲುಗುಲಿಸಿ ನಡೆಯುತ್ತಿದ್ದಳು. ಆದರೂ ಅದರತ್ತ ನನಗೆ ಎಂಥದೋ ಸೆಳೆತವುಂಟಾಯಿತು.

ಇಡೀ ನದಿಯ ನೀರನ್ನೆಲ್ಲ ಬಾಚಿ ಒಂದೇ ಗುಟುಕಿಗೆ ಕುಡಿದುಬಿಡಬೇಕೆಂಬಷ್ಟು ಹಂಬಲ.

